ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಗಡಿ

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ ದಿನಾಂಕ : DATE : 16/08/2019

# ರಕ್ಷಣಾ ಪಡೆಗಳ ದಂಡನಾಯಕ ಏನಿದು ಹೊಸ ಹುದ್ದೆ?



**20 ವರ್ಷ ಹಿಂದಿನ ರಕ್ಷಣಾ ಪಡೆಗಳ ದಂಡನಾಯಕ (ಸಿಡಿಎಸ್) ಹುದ್ದೆಯ ಪ್ರಸ್ತಾವನೆ ಮತ್ತೆ ಚಾಲ್ತಿಗೆ ಬಂದಿದೆ. ನಮ್ಮಲ್ಲಿ ರಾಷ್ಟ್ರಪತಿಯವರೇ ಮೂರೂ ಪಡೆಗಳ ಮಹಾ ದಂಡನಾಯಕರು. ಆದಾಗ್ಯೂ ಸಿಡಿಎಸ್ ಹುದ್ದೆಯ ಅಗತ್ಯವೇನು, ಅದರ ಅನುಕೂಲವೇನು ಎಂಬ ಮಾಹಿತಿ ಇಲ್ಲಿದೆ.**

ಉ.ವಾ. 16/8/19

## ವಾಜಪೇಯಿ ಸರ್ಕಾರದ ಪ್ರಸ್ತಾವನೆ

ಸಿಡಿಎಸ್ ಹುದ್ದೆ, ವಾಜಪೇಯಿ ಆಡಳಿತವಿದ್ದಾಗ ಆಗಿದ್ದ ಪ್ರಸ್ತಾವನೆ. ಎರಡು ದಶಕಗಳ ಹಿಂದೆ, ಆಗಿನ ಉಪಪ್ರಧಾನಿಯಾಗಿದ್ದ ಎಲ್.ಕೆ. ಅಡ್ವಾಣಿ ನೇತೃತ್ವದ ಸಚಿವರ ಸಮಿತಿ ಇದನ್ನು ಶಿಫಾರಸು ಮಾಡಿತ್ತು. ಆದರೆ, ಆಗಿನ ಅಧಿಕಾರಿ ವರ್ಗ, ಸೇನಾಧಿಕಾರಿಗಳ ವರ್ಗದಲ್ಲಿ ಸಿಡಿಎಸ್ ಬಗ್ಗೆ ಒಮ್ಮತ ಮೂಡದ ಕಾರಣ ಜಾರಿ ಆಗಿರಲಿಲ್ಲ. ಈ ಹಿಂದೆ, ರಕ್ಷಣಾ ಸಚಿವರಾಗಿದ್ದ ಮನೋಹರ್ ಪರ್ರಿಕರ್, ಹಾಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ಹುದ್ದೆಯ ಪ್ರಸ್ತಾವನೆ ಬೆಂಬಲಿಸಿದ್ದಾರೆ.

## ಸಿಡಿಎಸ್ ಅವಶ್ಯಕತೆ ಇದೆಯೇ?

ಸ್ವತಂತ್ರಾ ನಂತರ ನಡೆದಿರುವ 1962ರ ಯುದ್ಧ, 1971ರ ಇಂಡೋ-ಪಾಕಿಸ್ತಾನ ಸಮರ, 1999ರ ಕಾರ್ಗಿಲ್ ಯುದ್ಧದ ವೇಳೆ, ಭಾರತದ ಮೂರೂ ಪಡೆಗಳ ನಡುವಿನ ಸಮನ್ವಯತೆಗೆ ಆಡಳಿತಾತ್ಮಕ ತೊಡಕುಗಳು ಕಾಣಿಸಿದ್ದವು. ಹಾಗಾಗಿಯೇ, ಕಾರ್ಗಿಲ್ ಪರಿಶೀಲನಾ ಸಮಿತಿಯು (ಕೆಆರ್‌ಸಿ), ರಕ್ಷಣಾ ಪಡೆಗಳಲ್ಲಿರುವ ಬ್ರಿಟಿಷರ ಕಾಲದ ಶ್ರೇಣೀಕೃತ ಹುದ್ದೆಗಳ ಪರಿಷ್ಕರಣೆಯ ಅವಶ್ಯಕತೆಯನ್ನು ಒತ್ತಿ ಹೇಳಿತ್ತು.

## ಹುದ್ದೆಯ ಸ್ಥಾನಮಾನ ಏನು?

ಸಿಡಿಎಸ್ ಹುದ್ದೆಯು ಮೂರೂ ರಕ್ಷಣಾ ಪಡೆಗಳ ಮುಖ್ಯಸ್ಥರ ಮೇಲಿನ ಮಟ್ಟದ ಹುದ್ದೆಯಾಗಿರಬೇಕೇ ಅಥವಾ ಮೂರೂ ಮುಖ್ಯಸ್ಥರ ಹುದ್ದೆಗಳಿಗೆ ತತ್ಸಮಾನ ಹುದ್ದೆಯಾಗಿರಬೇಕೇ ಎಂಬುದಿನ್ನೂ ನಿರ್ಧಾರವಾಗಿಲ್ಲ. ಸಿಡಿಎಸ್ ಹುದ್ದೆಯ ಮಾರ್ಗಸೂಚಿಗಳಿಗಾಗಿ 'ಅನುಷ್ಠಾನ ಸಮಿತಿ' ನವೆಂಬರ್‌ನೊಳಗೆ ಸಲ್ಲಿಸಲಿರುವ ವರದಿಯನ್ವಯ ಹುದ್ದೆಯ ಸ್ಥಾನಮಾನ, ಸೇವಾವಧಿ ನಿರ್ಧಾರವಾಗುತ್ತದೆ.

## ಸದ್ಯದ ವ್ಯವಸ್ಥೆ ಹೇಗಿದೆ?

ಸದ್ಯದ ವ್ಯವಸ್ಥೆಯ ಪ್ರಕಾರ, ಎಲ್ಲಾ ರಕ್ಷಣಾ ಪಡೆಗಳ ಮುಖ್ಯಸ್ಥರಿಗೆ ಒಬ್ಬ ಪ್ರಧಾನ ಮುಖ್ಯಸ್ಥರ ಹುದ್ದೆ (ಚೇರ್ಮನ್ ಚೀಫ್ಸ್ ಆಫ್ ಸ್ಟಾಫ್ - ಸಿಒಎಸ್‌ಸಿ) ಇದೆ. ಇವರ ಅಧೀನದಲ್ಲಿ ಹೆಡ್‌ಕ್ವಾರ್ಟರ್ಸ್ ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್ (ಎಚ್‌ಕ್ಯು, ಐಡಿಎಸ್) ಎಂಬ ಕಾರ್ಯದರ್ಶಿ ಮಟ್ಟದ ಮತ್ತೊಂದು ಹುದ್ದೆಯಿದೆ. 2012ರಲ್ಲಿ ನರೇಶ್ ಚಂದ್ರ ಟಾಸ್ಕ್ ಫೋರ್ಸ್ ಸಮಿತಿಯು, ಶಾಶ್ವತ ಸಿಒಎಸ್‌ಸಿ ನೇಮಕವಾಗಬೇಕೆಂದು ಸರ್ಕಾರಕ್ಕೆ ಶಿಫಾರಸು ನೀಡಿತ್ತು. ಅದಿನ್ನೂ ಕಾರ್ಯಗತಗೊಂಡಿಲ್ಲ. ಹಾಗಾಗಿ, ಸಿಒಎಸ್‌ಸಿಯವರೇ ಈಗ ಸದ್ಯಕ್ಕೆ ಎಲ್ಲಾ ರಕ್ಷಣಾ ಪಡೆಗಳ ಮಹಾ ಮುಖ್ಯಸ್ಥರಾಗಿದ್ದಾರೆ.

## ಮೊದಲ ಸಿಡಿಎಸ್ ರಾವತ್?

**ಭೂ ಸೇನೆಯ 26ನೇ ಮುಖ್ಯಸ್ಥರಾಗಿರುವ ಬಿಪಿನ್ ರಾವತ್, ಇದೇ ಡಿಸೆಂಬರ್‌ನಲ್ಲಿ ನಿವೃತ್ತಿಯಾಗಲಿದ್ದು, ಆ ಹೊತ್ತಿಗೆ, ಸೇನಾ ಕಮಾಂಡರ್‌ಗಳಲ್ಲೇ ಅತಿ ಹಿರಿಯ ಕಮಾಂಡರ್ ಆಗಿ ರಾವತ್ ಅವರೇ ಗುರುತಿಸಲ್ಪಡುವುದರಿಂದ ಸಿಡಿಎಸ್ ಹುದ್ದೆಗೆ ಕೇಂದ್ರವು ಅವರನ್ನೇ ನೇಮಿಸಬಹುದು ಎಂದು ಹೇಳಲಾಗುತ್ತಿದೆ.**

